ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು
*ಮಂತ್ರಿಮಹೋದಯರು ನಿದ್ರಿಸುವಾಗ ಬೀಳುವ ಕನಸುಗಳು ಬಣ್ಣದ್ದೋ, ಬ್ಲ್ಯಾಕ್ ಅಂಡ್ ವೈಟೋ?*



ಆಶ್ವಾಸನೆ ನೀಡುವ ಕನಸುಗಳಾದರೆ ಬಣ್ಣದ್ದು, ಉಡುಪಿನ ಕನಸುಗಳು ವೈಟ್, ಹಣದ್ದು ಬ್ಲ್ಯಾಕ್!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಆ ದೇವಮಾನವನಿಗೂ ಸಾವಿನ ಸುಳಿವು ಸಿಗಲಿಲ್ಲವಲ್ಲಾ...?*
ಯಮನೂ ಬಾಬಾರ ಭಕ್ತರಂತೆಯೇ ಸಾಯಿ ಬಾಬಾ ಎಂದು ಕರೆದುದರಿಂದ ಸುಳಿವು ತಿಳಿಯಲಿಲ್ಲವಂತೆ!

ಎಂ.ಎಸ್.ಧರ್ಮೇಂದ್ರ, ಜಿ.ಟಿ.ಆರ್.ಐ. ಕ್ಯಾಂಪಸ್
*ರಾವಣ ಬೆಂಗಳೂರಿನಲ್ಲಿ ಬೈಕ್ ಓಡಿಸಿದರೆ ಎಲ್ಲಾ ತಲೆಗಳಿಗೂ ಶಿರಸ್ತ್ರಾಣ ಹಾಕಬೇಕಾ?*
ತಲೆ ಹೋದರೂ ರೀಪ್ಲೇಸ್‌ಮೆಂಟ್ ತಲೆ ಬರುವುದರಿಂದ ರಾವಣನಿಗೆ ಹೆಲ್ಮೆಟ್‌ನ ಅಗತ್ಯವೇ ಇಲ್ಲ!

ಟಿ.ಆರ್. ರವೀಂದ್ರ, ಬೆಂಗಳೂರು
*ಹೆಣ್ಣು ಜಾರಿದರೆ ವ್ಯಭಿಚಾರ, ಗಂಡು ಜಾರಿದರೆ?*
ಅ(ವ್ಯ)ಭಿರುಚಿ!

ಕೇಶವ.ಎನ್.ಪೈ, ಕಾಸರಕೋಡ
*ಹುಡುಗರು ಪ್ರೀತಿ ಪ್ರಾರಂಭಿಸಲು ಮತ್ತು ಹುಡುಗಿಯರು ಪ್ರೀತಿ ಕೊನೆಗಾಣಿಸಲು ಬಳಸುವ ಪದ ಯಾವುದು?*




ಎಕ್ಸ್‌ಕ್ಯೂಸ್ ಮಿ!

ಅನುರಾಧಾ ಎಸ್.ಆರ್, ಯಲಹಂಕ
*ಮಾತೃ ದೇವೋಭವ, ಪಿತೃ ದೇವೋಭವ ಎನ್ನುವ ನಮ್ಮ ಸಂಸ್ಕೃತಿಯಲ್ಲಿ ಅಮ್ಮ ಲೂಸಾ, ಅಪ್ಪ ಲೂಸಾ ಎಂದು ಹಾಡು ರಚಿಸುವವರಿಗೆ ನಿಮ್ಮ ಸಲಹೆ?*
ಶುದ್ಧ ತಪ್ಪು! ಅಮ್ಮನ ಬಗ್ಗೆ ಹಾಗೆಲ್ಲಾ ಅನ್ನಬಾರದು; ಅಪ್ಪನ ಬಗ್ಗೆ? ಅಪ್ಪ ಟೈಟಾ? ಅನ್ನೋದು ಮದ್ಯಕಾಲೀನ ಕವಿತೆ!

ಕಂಡಕ್ಟರ್ ರಾಜು, ಗುಬ್ಬಿ
*ಎಲ್ಲಾ ಧರ್ಮಗಳಲ್ಲಿಯೂ ಪರದಾ ಪದ್ಧತಿ ಇದ್ದಿದ್ದರೆ ಏನಾಗುತ್ತಿತ್ತು?*
ಸೊಳ್ಳೆಗಳಿಗೆ ಕಚ್ಚಲು ಚರ್ಮವೇ ಸಿಗದಂತಾಗುತ್ತಿತ್ತು!

ಗೀತಾ ಬರ್ಲ, ಬೆಂಗಳೂರು
*ಮದುವೆಯಾದ ಪುರುಷರು ಏಕಾದರೂ ಮದುವೆಯಾದೆವೋ ಎಂದು ಪ್ರಲಾಪಿಸಿದರೆ ಬ್ರಹ್ಮಚಾರಿಗಳು ಯಾವಾಗಲೂ ಮದುವೆ ಎಂದು ಕನವರಿಸುತ್ತಾರಲ್ಲಾ?*
ಮದುವೆ ಚಳಿಗಾಲದ ಮೆಣಸಿನಕಾಯಿ ಬೋಂಡದಂತೆ; ಸೇವಿಸದವರಿಗೆ ಲಾಲಾರಸ, ಸೇವಿಸಿದವರಿಗೆ ಲಾವಾರಸ!

ಎನ್.ಎಂ.ಪೈ, ಹೊನ್ನಾವರ
*ಸೂರ್ಯ ವಿದ್ಯುತ್ ನಿಗಮದ ನಿಯಂತ್ರಣದಲ್ಲಿದ್ದರೆ ... ?*
ಲಂಚದ ರಾಹು– ಕೇತುಗಳಿಂದ ಹೆಚ್ಚು ಹೆಚ್ಚು ಗ್ರಹಣಗಳಾಗುತ್ತಿದ್ದವು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ರಾಮ ಕೃಷ್ಣರಿಬ್ಬರೂ ವಿಷ್ಣುವಿನ ಅಂಶವೇ ಆಗಿದ್ದರೂ ರಾಮ ಏಕಪತ್ನೀವ್ರತಸ್ಥ, ಕೃಷ್ಣ ಸ್ತ್ರೀಲೋಲ; ಏಕೆ?*
ಪ್ರಾಯಶಃ ಕೃಷ್ಣ ಡ್ಯಾನ್ಸರ್ ಮತ್ತು ಮ್ಯೂಸಿಸಿಯನ್ ಆಗಿದ್ದರಿಂದಿರಬೇಕು; ಕಲಾವಿದರಿಗೆ ಖಯಾಲಿ ಹೆಚ್ಚು!

ಶಿವಮೊಗ್ಗ ರಮೇಶ್, ಮೈಸೂರು
*ನಾರಿಗೆ ತನ್ನ ಸೌಂದರ್ಯ ಕುಗ್ಗುತ್ತಿದೆ ಎನ್ನುವ ಭಯ ಯಾವಾಗ ಶುರುವಾಗುತ್ತದೆ?*
ಮೇಕಪ್‌ಗೆ ಮುಂಚೆ ಕನ್ನಡಿ ನೋಡಿಕೊಂಡಾಗ!

ಶಂಕರ ಹೆಬ್ಬಾಳ, ಮುದ್ದೇಬಿಹಾಳ
*ಜಾತಿಯಿಂದ ಮುಖ್ಯಮಂತ್ರಿಗಳ ಪಟ್ಟ ಉಳಿಸಿಕೊಳ್ಳುವುದು ಎಷ್ಟು ಸೂಕ್ತ?*
ನಾಯಿಗಳಿಗಾದರೆ ಜಾತಿನಾಯಿ ಕಂತ್ರಿನಾಯಿ ಎಂಬ ವಿಂಗಡಣೆ ಬೇಕು; ನಾಯಕರಿಗೂ.....!?

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ತವರಿಗೆ ಹೋಗಿ 15 ದಿನ ಇದ್ದು ಬಾ ಎಂದು ಎಷ್ಟೇ ಒತ್ತಾಯಿಸಿದರೂ ನಮ್ಮವಳು ಹೋಗುತ್ತಿಲ್ಲವಲ್ಲಾ?*
ಛೆ! ನಿಮ್ಮ ಕಲ್ಯಾಣ ಗುಣಗಳು ಅವರಿಗೆ ತಿಳಿದುಬಿಟ್ಟಿವೆ!

## ಬಹುಮಾನಿತ ಪ್ರಶ್ನೆ

ಹಾಡ್ಯ ಜಯಾನಂದ, ಮೈಸೂರು
*ದಂಪತಿಯಲ್ಲಿ ಪತ್ನಿ ಯೇ ಇಲ್ಲವಲ್ಲಾ... ?*
ಪತಿಗೆ ದಂ (ಉಬ್ಬಸ) ಇದ್ದುದರಿಂದ ಬಿಟ್ಟು ಹೋದಳಂತೆ!

ಪಿ.ಜಿ.ರಾಘವೇಂದ್ರ, ಮೈಸೂರು
*ವಿಕ್ರಮಾದಿತ್ಯನ ಸ್ಥಾನದಲ್ಲಿ ಅಕ್ರಮಾದಿತ್ಯರೇ ಕುಳಿತರೆ ನಾಡಿನ ಗತಿ?*
ಸರಿಪಡಿಸಲು ಪ್ರತಿ branchಗೂ ಒಂದು ಬೇತಾಳ ಬಿಡದೆ ಅಂಟಿಕೊಳ್ಳಬೇಕಾಗುತ್ತದೆ!

ಎಂ.ಜಿ.ನೇಹರ್ವಣೆ, ಬಳ್ಳಾರಿ
*ಪ್ರೀತಿ ಮಾಡುವವರಿಗೆ ರೇಷನ್ ಕಾರ್ಡ್ ಇರಲೇಬೇಕು ಎಂದು ಕಾನೂನು ಜಾರಿ ಮಾಡಿದರೆ?*
ವಿಳಾಸವನ್ನು ಕೇರ್‌ಆಫ್ ಪಾರ್ಕ್, ಕೇರ್ ಆಫ್ ಎಂ.ಜಿ.ರೋಡ್, ಕೇರ್ ಆಫ್ ಹೋಟೆಲ್, ಕೇರ್ ಆಫ್ ಮೆಂಟಲ್ ಹಾಸ್ಪಿಟಲ್ ಎಂದೆಲ್ಲಾ ಕೊಡಬೇಕಾದೀತು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಪ್ಪೋ! ನಾರಿಗೂ, ನಾರಿಕೇಳಕ್ಕೂ ಇರುವ ಬಿಡಿಸಲಾಗದ ಸಂಬಂಧ ಏನಿದೆಯಪ್ಪಾ?*



ಸಿಕ್ಕುಸಿಕ್ಕಾದ ಜುಟ್ಟು!

ಲೋಹಿತ್, ತುಮಕೂರು
*ಸ್ವಾಮೀಜಿಗೂ ರಾಜಕಾರಣಿಗೂ ಇರುವ ವ್ಯತ್ಯಾಸವೇನು ಗುರುಗಳೇ?*
ಬದುಕನ್ನು ಈಜಿ ದಾಟುವವರು ಸ್ವಾಮೀಜಿ, ರಣ ಮಾಡಿಕೊಳ್ಳುವವರು ರಾಜಕಾರಣಿ!

ವಸುಂಧರಾ ಸತ್ಯ, ದೊಡ್ಡಬಳ್ಳಾಪುರ
*ಶ್ರೀಸತ್ಯಸಾಯಿಬಾಬಾರವರ ಸಾವಿನಿಂದ ಇಂದಿನ ಜಗದ್ಗುರುಗಳು ಏನಾದರೂ ಪಾಠ ಕಲಿಯುವುದು ಇದೆಯಾ?*
ಆಸ್ತಿ ಇತ್ಯರ್ಥವಾಗುವವರೆಗೆ ಅಸ್ಥಿಗೆ ಮೋಕ್ಷವಿಲ್ಲ ಎಂದು!

ಬಿ.ಎಸ್. ಮಳ್ಳೂರ, ಹಲಗತ್ತಿ
*ಹೆಣ್ಣಿಗೆ ಪತಿವ್ರತೆ ಎಂಬ ಬಿರುದಿದೆ; ಗಂಡಿಗೆ?*
ಪತ್ನಿವಾಕ್ಯ ಪರಿಪಾಲಕ!

■ ರಾಮ್